ಅಸಲು ದಾವಾ ಸಂ. 95 ಃ 2010

ಪಿ.ಡಬ್ಲ್ಯೂ. 1, ಪ್ರಃಮಾಃದಿಃ 16-11-2016.

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು, ಮಧ್ಯಂತರ ಅರ್ಜಿ ನಂ.11 ಮತ್ತು 12 ರ ಆದೇಶದ ಮೇರೆಗೆ ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ ಕೆ ಜೆ ವಕೀಲರಿಂದಃ-

ಉಡೇವು ಆಸ್ತಿಗಳನ್ನು ಸಂರಕ್ಷಣೆ ಮಾಡುವ ಅಧಿಕಾರ ಪ್ರತಿವಾದಿ ನಂ. 13 ಮತ್ತು 14 ರವರಿಗೆ ಸಂಬಂದಪಟ್ಟ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅವರಿಗೆ ಅಧಿಕಾರ ಇದೆ ಅಂತ ತೋರಿಸಲು ಯಾವುದೇ ಅಧಿಕಾರ ಇಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಖಾತಾ ನಕಲುಗಳನ್ನು ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ನಿಪಿ-1 ಆಗಿರುತ್ತದೆ. ನಿಪಿ-1 ರಲ್ಲಿ ಆ ರೀತಿ ಅಧಿಕಾರ ಕೊಟ್ಟ ಬಗ್ಗೆ ನಮೂದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಸರ್ಕಾರಿ ಜಾಗ ಇದೆ ಎನ್ನುತ್ತಾರೆ. ನಿಪಿ-1 ರಲ್ಲಿ ಪ್ರತಿವಾದಿಗಳ ಆಸ್ತಿ ಕೂಡಾ ಸೇರಿದೆ ಎಂದರೆ ಸರಿ. ಉಡೇವು ಜಾಗವನ್ನು ಒತ್ತುವರಿ ಮಾಡಿದ್ದಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೇನೆ. ಇಷ್ಟೇ ಜಾಗವನ್ನು ಒತ್ತುವರಿ ಮಾಡಿದ್ದಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ, ಸಾರ್ವಜನಿಕರ ಪರವಾಗಿ ಹಾಕಿರುವ ದಾವೆಗೆ ಅನುಮತಿ ಪಡೆದಿರುತ್ತೇನೆ. ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಸರ್ಕಾರದಿಂದ ಅನುಮತಿ ಪಡೆದಿಲ್ಲ, ದಾವೆ ಸಲ್ಲಿಸಲು ನನಗೆ ಯಾವುದೇ ತರಹದ ಅಧಿಕಾರ ಇಲ್ಲ ಎಂದರೆ ಸರಿಯಲ್ಲ, ಸಾರ್ವಜನಿಕರು ಸಲ್ಲಿಸಿದ್ದೇವೆ. ಪ್ರತಿವಾದಿಯರು ಯಾವತ್ತೂ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ, ದಾವಾ ಆಸ್ತಿಯ ಬಗ್ಗೆ ವಿವರಣೆ ಇಲ್ಲ ಎಂದರೆ ಸರಿಯಲ್ಲ, ನಾನು ದಾವಾದಲ್ಲಿ ವಿವರಿಸಿರುವ ಆಸ್ತಿಗಳಿಗೂ ಮತ್ತು ಹಾಜರುಪಡಿಸಿರುವ ದಾಖಲೆಗಳಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ, ಉಳಿದ ವಾದಿಯರ ಒಪ್ಪಿಗೆಯ ಪ್ರಮಾಣ ಪತ್ರ ಹಾಕಿಲ್ಲ ಎಂದರೆ ಸರಿಯಲ್ಲ, ಉಳಿದ ವಾದಿಯರಿಗೆ ಒತ್ತಾಯ ಮಾಡಿ ಸಹಿ ಹಾಕಿಸಿ ನಾನು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ, ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳುವುದಿಲ್ಲ ಅಂತ ಹೇಳಿದ್ದರಿಂದ ನಾನು ಅವರ ಪರವಾಗಿಯೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ, ಪ್ರತಿವಾದಿ ನಂ.1 ರಿಂದ 4 ಮತ್ತು 7 ರಿಂದ 12 ರವರು ಪ್ರಾಣ ಬೆದರಿಕೆ ಹಾಕಿದ್ದಾರೆ ಅಂತ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ, ಈಗಲೂ ಉಡೇವುಗೆ ಹೋಗಿ ಬರಲು ಅವಕಾಶ ಇದೆ ಎಂದರೆ ಸರಿಯಲ್ಲ, ಜಾಗವೇ ಬಿಟ್ಟಿರುವುದಿಲ್ಲ, ಉಡೇವು ತುಂಬಾ ಪುರಾತನದು ಇರುತ್ತದೆ. ಅದನ್ನು ಪ್ರತೀ ವರ್ಷ ರಿಪೇರಿ ಮಾಡುತ್ತಿದ್ದರೂ ಇತ್ತೀಚೆಗೆ ಯಾರಿಗೂ ಹೋಗಲು ಬಿಡುತ್ತಿಲ್ಲ ಹಾಗಾಗಿ ರಿಪೇರಿ ಮಾಡಿಲ್ಲ, ಪ್ರತೀ ವರ್ಷ ಕಟ್ಟಿಗೆ ಬೆಳೆಯುವುದನ್ನು ಗ್ರಾಮ ಪಂಚಾಯಿತಿಯವರು ಸ್ವಚ್ಚ ಮಾಡುತ್ತಿದ್ದರು. ಗ್ರಾಮ ಪಂಚಾಯಿತಿಯವರು ರಿಪೇರಿ ಮಾಡುವ ಬಗ್ಗೆ ಖರ್ಚು ವೆಚ್ಚದ ಬಗ್ಗೆ ಲೆಕ್ಕ ಇಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಸದರಿ ಸ್ವತ್ತು ಗ್ರಾಮ ಪಂಚಾಯಿತಿಗೆ ಸೇರಿದವು ಅಂತ ದಾಖಲೆ ಹಾಜರುಪಡಿಸಿರುತ್ತೇನೆ. ಸರ್ಕಾರ ಎಂದರೆ ಕೇವಲ ಗ್ರಾಮ ಪಂಚಾಯಿತಿ ಅಲ್ಲ ಎಂದರೆ ಗೊತ್ತು, ನಾನು ಹಾಜರುಪಡಿಸಿರುವ ದಾಖಲೆಗಳು ಗ್ರಾಮ ಪಂಚಾಯಿತಿ ಅಂತ ನಮೂದು ಇಲ್ಲ ಸರ್ಕಾರ ಅಂತ ನಮೂದು ಇದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಗ್ರಾಮ ಪಂಚಾಯಿತಿಯವರು ಕೊಟ್ಟಂತಹ ದಾಖಲೆಗಳು ಎನ್ನುತ್ತಾರೆ.

ಗ್ರಾಮ ಪಂಚಾಯಿತಿಯವರು ನಮ್ಮ ಆಸ್ತಿಗಳ ಹಾಗೂ ಬೇರೆಯವರ ಆಸ್ತಿಗಳ ದಾಖಲೆಗಳನ್ನು ಇಟ್ಟುಕೊಳ್ಳುತ್ತಾರೆ ಎಂದರೆ ಸರಿ. ಅಂತ ದಾಖಲೆಗಳನ್ನು ನಾನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಪ್ರತಿವಾದಿಯರು ಪ್ರಾಣ ಬೆದರಿಕೆ ಹಾಕಿರುವ ಬಗ್ಗೆ ಕಂಪ್ಲೇಂಟ್ ಕೊಟ್ಟು ರಿಜಿಸ್ಟರ್ ಆಗಿದೆಯಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಕಂಪ್ಲೇಂಟ್ ಕೊಟ್ಟಿರುವುದಕ್ಕೆ ಸ್ವೀಕೃತಿ ಕೊಟ್ಟು ರಿಜಿಸ್ಟರ್ ಮಾಡಿಲ್ಲ ಎನ್ನುತ್ತಾರೆ. ಸದರಿ ಪ್ರಕರಣದಲ್ಲಿ ಸತ್ಯಾಂಶ ಇರದೇ ಇರುವ ಕಾರಣ ಪ್ರಕರಣ ದಾಖಲಿಸಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅಲ್ಲಿ ಪ್ರತಿವಾದಿಯರು ಒತ್ತುವರಿ ಮಾಡಲ್ಲ, ತೊಂದರೆ ಕೊಡುವುದಿಲ್ಲ ಅಂತ ಮುಚ್ಚಳಿಕೆ ಬರೆದುಕೊಟ್ಟಿದ್ದಾರೆ. ಪ್ರತಿವಾದಿಯರು ಮುಚ್ಚಳಿಕೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಹಿಂಬರಹ ನಿಪಿ-3 ಕೊಟ್ಟ ನಂತರ ನಾವು ಅಳತೆ ಮಾಡಿಸಿಲ್ಲ. ಸಂಬಂದಪಟ್ಟ ಅಧಿಕಾರಿಗಳು ಅಳತೆ ಮಾಡಿಕೊಟ್ಟರೆ ಬಿಟ್ಟು ಕೊಡುತ್ತೇವೆ ಎನ್ನುತ್ತಾರೆ. ನಿಪಿ-3 ರ ದಾಖಲೆಯನ್ನು ಪರಮೇಶ್ವರಪ್ಪ ಇವರಿಗೆ ಕೊಟ್ಟಿದ್ದು ಎಂದರೆ ಸರಿಯಲ್ಲ. ನಾನು ಇರುತ್ತೇನೆ. ಆ ರೀತಿ ಹಿಂಬರಹ ಕೊಟ್ಟ ಮೇಲೆ ಅಳತೆ ಮಾಡಿಸಿದ್ದೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಪಂಚಾಯಿತಿ ಕಾರ್ಯದರ್ಶಿ ಬರದ ಹಾಗೆ ನೋಡಿಕೊಂಡರು ಎನ್ನುತ್ತಾರೆ. ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸುವಗೋಸ್ಕರ ಈ ರೀತಿ ದಾಖಲೆಗಳನ್ನು ಇಟ್ಟುಕೊಂಡಿದ್ದೇವೆ ಎಂದರೆ ಸರಿಯಲ್ಲ. ಕಾರ್ಯದರ್ಶಿಯವರು ಬರದೇ ಇರುವ ಹಾಗೆ ಕ್ರಮ ತೆಗೆದುಕೊಂಡರು ಅಂತ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾವು ನೋಡಲ್ ಅಧಿಕಾರಿಗಳಿಗೆ ಅರ್ಜಿ ಕೊಟ್ಟಿರುತ್ತೇವೆ. ಆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಊರಲ್ಲಿ ಎಲ್ಲರೂ ನೆಮ್ಮದಿಯಾಗಿದ್ದು ಕೇಸು ಹಾಕಿ ಒಬ್ಬರಿಗೊಬ್ಬರು ಮನಸ್ತಾಪ ಆಗುವ ಹಾಗೆ ಉಂಟು ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಕೇಸಲ್ಲದೇ ಬೇರೆ ಬೇರೆ ವಿಚಾರವಾಗಿ ಬೇರೆ ನ್ಯಾಯಾಲಯದಲ್ಲಿ ಕೇಸು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೊಂಡುಕೊಂಡ ಆಸ್ತಿ ನಮ್ಮ ಹೆಸರಿಗೆ ನೋಂದ್ ಮಾಡಿಕೊಟ್ಟಿಲ್ಲ ಅಂತ ಪ್ರಕರಣ ದಾಖಲಿಸಿರುತ್ತೇನೆ. ಅದಲ್ಲದೇ 3 – 4 ಪ್ರಕರಣಗಳಿಗಿಂದ ಹೆಚ್ಚಿಗೆ ಪ್ರಕರಣಗಳನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. 3 – 4 ಪ್ರಕರಣಗಳು ಮುಕ್ತಾಯಗೊಂಡಿರುತ್ತವೆ. ಹೆಚ್ಚಿಗೆ ಪ್ರಕರಣ ದಾಖಲಿಸಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಣಕಾಸಿನ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ಕೆಲವೊಂದು ಆಸ್ತಿ ವಿಚಾರವಾಗಿ ಒಪ್ಪಂದ ಪತ್ರ ಮಾಡಿಕೊಂಡು ಪ್ರಕರಣಗಳನ್ನು ದಾಖಲಿಸಿದ್ದೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅವು ನಿಖಾಲಿಯಾಗಿವೆ ಎನ್ನುತ್ತಾರೆ. ಹಣಕಾಸಿನ ವ್ಯವಹಾರವಾಗಿ ನಾನು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಆ ರೀತಿ ಹಣದ ವ್ಯವಹಾರ ಮಾಡದೇ ಇರುವ ಕಾರಣ ನಾನು ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ಸೃಷ್ಟಿ ಮಾಡಿರುವ ದಾಖಲೆಗಳು ಎಂದರೆ ಸರಿಯಲ್ಲ. ನಾನು ಹಾಕಿರುವ ದಾಖಲೆಗಳು ಪ್ರತಿವಾದಿಗೆ ಸಂಬಂದಪಟ್ಟ ಆಸ್ತಿಯ ದಾಖಲೆಗಳು ಇವೆ ಎಂದರೆ ಸರಿ. ಪ್ರತಿವಾದಿಯರು ಯಾವುದೇ ಆಸ್ತಿಯನ್ನು ಒತ್ತುವರಿ ಮಾಡದೇ ಇದ್ದರೂ ಮಾಡಿದ್ದಾರೆ ಅಂತ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ದಾವೆ ದಾಖಲಿಸಲು ಯಾವುದೇ ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ. ನಾನು ಕೇಳಿರುವ ಪರಿಹಾರವು ಯಾವುದೇ ನಿಖರತೆ ಇಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಕೇಳಿರುವ 20 ಸಾವಿರ ರೂ ವೆಚ್ಚವನ್ನು ಕೊಡಲು ಪ್ರತಿವಾದಿಯರು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ಅವನಾಶ್ಯಕವಾಗಿ

ಪ್ರತಿವಾದಿಯರನ್ನು ಕೋರ್ಟಿಗೆ ಕರೆಸಿದ್ದು ನಾನೇ ವೆಚ್ಚವನ್ನು ಕೊಡಲು ಬಾದ್ಯಸ್ಥ ಎಂದರೆ ಸರಿಯಲ್ಲ. ಪ್ರತಿಕಾ ಮಾದ್ಯಮದವರಿಗೆ ಸುಳ್ಳು ಮಾಹಿತಿ ಕೊಟ್ಟು ಸುಳ್ಳು ಪತ್ರಿಕಾ ವರದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಉಡೇವು ತುಂಬಾ ಹಳೆಯದು ಆಗಿರುವ ಕಾರಣ ಬಿದ್ದು ಹೋಗುವ ಸ್ಥಿತಿಯಲ್ಲಿದೆ ಎಂದರೆ ಸರಿಯಲ್ಲ. ಹಣ ಬಿಡುಗಡೆಯಾಗಿದ್ದು ಕೆಲಸ ಮಾಡಲು ಬಿಡುತ್ತಿಲ್ಲ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಕೇಳಿರುವ ಪರಿಹಾರ ಪಡೆಯಲು ಬಾದ್ಯಸ್ಥನಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

**(ತೆರೆದ ನ್ಯಾಯಾಲಯಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓದಿ ಹೇಳಿ ಕೇಳಿ ಸರಿಯಿದೆ

ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾಳಿ